**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ .447/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಪ್ರತಾಪ್ | **ಚಾ.ಸಾ.-3** |
| **ತಂದೆ/ಗಂಡನ ಹೆಸರು** | - | ಚೌಡಯ್ಯ | **ಪ್ರಾ.ಸಾ.-6** |
| **ವಯಸ್ಸು** | - | 36 ವರ್ಷ | |
| **ಉದ್ಯೋಗ** | - | ಕೂಲಿ ಕೆಲಸ | |
| **ವಾಸಸ್ಥಳ** | - | ಕೆ ಹೊನ್ನಲಗೆರೆ | |

ದಿನಾಂಕಃ 07-07-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಚಾ.ಸಾ. 1, 2 ಮತ್ತು 4 ರವರು ಮತ್ತು ಆರೋಪಿತ ಪರಿಚಯವಿರುತ್ತದೆ. ನಮ್ಮ ಗ್ರಾಮಸ್ಥರು ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ, ನಾನು ಯಾವುದೇ ಗಲಾಟೆಯನ್ನು ನೋಡಿರುವುದಿಲ್ಲ ಮತ್ತು ಬಿಡಿಸಿರುವುದಿಲ್ಲ ಮತ್ತು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**( ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ದಿಃ 01-05-2016 ರಂದು ಸಂಜೆ 05-00 ಗಂಟೆ ಸಮಯದಲ್ಲಿ ನಾನು ಮತ್ತು ಚಾಸಾ-4 ರವರು ನಮ್ಮ ಗ್ರಾಮದ ಮದ್ದೂರು ಹಲಗೂರು ರಸ್ತೆಯ ಚಾಸಾ-2 ರವರ ಮನೆಯ ಮುಂಭಾಗ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಆ ಸಮಯದಲ್ಲಿ ಚಾಸಾ-1 ರವರು ಕಸವನ್ನು ಸುರಿಯಲು ತಿಪ್ಪೆ ಕಡೆಗೆ ಹೋಗುತ್ತಿದ್ದರು ಎಂದರೆ ಸರಿಯಲ್ಲ. ಆಗ ಆರೋಪಿ-1 ರವರು ಚಾಸಾ-1 ರವರಿಗೆ ನಿನ್ನ ಗಂಡನಿಗೆ ಹಾರ್ಟ್ ಆಪರೇಷನ್ ಆಗಿದೆ ಅವರ ಕೈಯಲ್ಲಿ ಏನು ಆಗುವುದಿಲ್ಲ ನನ್ನ ಹತ್ತಿರ ಬಾ ಎಂದು ಕರೆದಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-1 ರವರು ನಾನು ನಡತೆಗೆಟ್ಟ ಹೆಂಗಸಲ್ಲ ಎಂದು ಹೇಳಿದ್ದಕ್ಕೆ

ಆರೋಪಿತರು ಅಕ್ರಮವಾಗಿ ಗುಂಪು ಕಟ್ಟಿಕೊಂಡು ಚಾಸಾ-1 ರವರಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ-1, 2 ರವರು ಚಾಸಾ-1 ರವರ ಸೀರೆಯನ್ನು ಹಿಡಿದು ಎಳೆದಾಡಿ ಸಾರ್ವಜನಿಕವಾಗಿ ಅವರಿಗೆ ಅವಮಾನ ಮಾಡಿ ಮೈ ಕೈ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-2 ರವರು ಜಗಳ ಬಿಡಿಸಲು ಬಂದಿದ್ದು ಆರೋಪಿತರು ದೊಣ್ಣೆಯಿಂದ ಚಾಸಾ-2 ರವರ ಬೆನ್ನಿನ ಮೇಲೆ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಆರೋಪಿ -1 ರವರು ಕುಡಲಿನಿಂದ ಚಾಸಾ-2 ರವರ ಮುಖದ ಮೇಲೆ ಹಲ್ಲೆ ಮಾಡಲು ಹೋದಾಗ ಚಾಸಾ-2 ರವರು ಬಾಯಿ ಬಡಿದುಕೊಂಡಿದ್ದು ಆಗ ಆರೋಪಿ-1 ರವರು ಚಾಸಾ-2 ರವರ ಗದ್ದದ ಮೇಲೆ ಹಲ್ಲೆ ಮಾಡಿದ್ದು ಅವರಿಗೆ ರಕ್ತಗಾಯುಂಟಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಆರೋಪಿ-5 ರಿಂದ 7 ರವರು ಚಾಸಾ-1 ರವರನ್ನು ನೆಲಕ್ಕೆ ಕೆಡವಿ ಕೊಲೆ ಬೆದರಿಕೆ ಹಾಕಿ ಕಾಲಿನಿಂದ ಮೈ ಕೈ ಮೇಲೆ ತುಳಿದಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು, ಚಾಸಾ-4 ರವರು ಹೋಗಿ ಜಗಳ ಬಿಡಿಸಿ ಸಮಾಧಾನಪಡಿಸಿರುತ್ತೇವೆ ಎಂದರೆ ಸರಿಯಲ್ಲ.

ಈಗ ನನಗೆ ಓದಿ ಹೇಳಿದಂತೆ ದಿಃ 02-05-2016 ರಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗೆಳೆದ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು.

ಈ ಪ್ರಕರಣದ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀಸವಾಲುಃ ಏನು ಇಲ್ಲ.**

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ , ಮದ್ದೂರು.